ಕುಟುಂಬವಿತ್ತು. ನನ್ನ ಏಳು ಜನ ಮಕ್ಕಳು ಹೇಗೆ ದೊಡ್ಡವರಾದರೆಂದು ಗೊತ್ತೇ ಆಗಲಿಲ್ಲ. ಈಗಿನವರು ಒಂದು ಮಗುವನ್ನು ನೋಡಿಕೊಳ್ಳಲೂ ಅಳುತ್ತಾರೆ.'

ಕೂಡು ಕುಟುಂಬದ ಬಗ್ಗೆ ಒಂದು ಸಣ್ಣ ಚರ್ಚೆಯಾದ ಮೇಲೆ ಕಾವೇರಮ್ಮ ಹೊರಟು ಹೋದರು. ನಾನು ಅಮ್ಮನಿಗೆ, 'ನನ್ನ ಅತ್ತೆ ಹಾಗೂ ಓರಗಿತ್ತಿಯರನ್ನು ಅಷ್ಟೊಂದು ಹೊಗಳುವ ಅವಶ್ಯಕತೆ ಏನಿತ್ತು? ಅವರು ನನ್ನ ಮಕ್ಕಳನ್ನು ಹೇಗೆ ನೋಡಿಕೊಳ್ಳುವರೆಂದು ನಿನಗೆ ಗೊತ್ತಿದೆಯಾ?'

'ಚೆನ್ನಾಗಿಯೇ ನೋಡಿಕೊಳ್ಳುತ್ತಿರಬಹುದು. ಅದಕ್ಕಾಗಿಯೇ ನೀನಿಲ್ಲಿ ಇಷ್ಟು ನಿಶ್ಚಿಂತೆಯಿಂದಿರುವಿ. ಇಲ್ಲದೇ ಹೋಗಿದ್ದದರೆ ಇಷ್ಟರಲ್ಲಿ ಹತ್ತು ಫೋನುಗಳು ಬರುತ್ತಿದ್ದವು.'

'ಅದಿರಲಿ, ನನಗೆ ಹುಷಾರಿಲ್ಲವೆಂದು ಏಕೆ ಹೇಳಿದೆ? ಅವತ್ತು ವಿವೇಕನೂ, 'ಅಕ್ಕ, ಚೆಕಪ್ಪಿಗೆ ಯಾವತ್ತು ಹೋಗುವುದೆಂದು ಹೇಳು, ಅವತ್ತು ನಾನು ರಜೆ ಹಾಕುತ್ತೇನೆ' ಎಂದು ಹೇಳುತ್ತಿದ್ದ. ಏನಾದರೂ ಕಾಯಿಲೆ ಇದ್ದರೇ ನಾನಿಲ್ಲಿಗೆ ಬರಬೇಕಾ? ಸುಮ್ಮನೆ ಬರಬಾರದಾ?'

'ಹುಚ್ಚಿ, ಏನು ಮಾತೂಂತ ಆಡುತ್ತೀಯಾ, ಇದು ನಿನ್ನ ತಾಯಿಯ ಮನೆ. ನಾನಿರುವವರೆಗಂತೂ ನೀನಗಿಲ್ಲಿಗೆ ಬರಲು ಯಾವ ಆತಂಕವೂ ಬೇಡ. ಆದರೂ ತವರುಮನೆಗೆ ಬರಲೂ ಏನಾದರೂ ಕಾರಣ ಬೇಕಾಗುತ್ತದೆ ಮಗಳೇ. ಎಲ್ಲರಿಗೂ ನೀನು ಗಂಡನೊಡನೆ ಜಗಳ ಮಾಡಿಕೊಂಡು ಬಂದಿರುವಿ ಎಂದು ಹೇಳಲಾಗುತ್ತದಾ? ಏನಾದರೂ ಒಂದು ನೆಪ ಬೇಕಲ್ಲ.'

'ನಾನು ಅವರೊಡನೆ ಜಗಳಾಡಿಕೊಂಡು ಬಂದಿರುವೆನೆಂದು ನಿನಗ್ಯಾರು ಹೇಳಿದರು?'

'ನೀನಿಲ್ಲಿಗೆ ಬಂದು ಹತ್ತು ದಿನಗಳಾದರೂ ಅಲ್ಲಿಂದ ಒಂದು ಫೋನೂ ಇಲ್ಲ. ನೀನೂ ಅಲ್ಲಿಯ ವಿಷಯ ಒಂದು ಮಾತನ್ನೂ ಆಡಿಲ್ಲ. ವಯಸ್ಸಾದರೇನಾಯಿತು ನನಗೆ ಅಷ್ಟೂ ಗೊತ್ತಾಗುವುದಿಲ್ಲವೇ?'

'ಹೌದಮ್ಮ, ನೀನು ತುಂಬ ಬುದ್ಧಿವಂತೆ. ಪ್ರವಚನಕ್ಕೆ ಹೋಗಿದ್ದರೆ ಇನ್ನೂ ಹೆಚ್ಚು ಜ್ಞಾನ ಸಂಪಾದನೆ ಮಾಡಬಹುದಿತ್ತು. ನನ್ನಿಂದಾಗಿ ಸುಮ್ಮನೇ ಹೋಗುವುದನ್ನು ಬಿಟ್ಟೆ.'

'ನಾನು ನಿನಗೋಸ್ಕರ ಹೋಗುವುದನ್ನು ಬಿಡಲಿಲ್ಲ. ವಿವೇಕ–ರಶ್ಮಿ ಮನೆಗೆ ಬರಲು ಹತ್ತು ಗಂಟೆಯಾದರೂ ಆಗುತ್ತದೆ. ಅವರು ಅಮ್ಮ–ಮಗಳಿಬ್ಬರೂ ಮನೆಯಲ್ಲಿದ್ದು ನಾಲ್ಕು ಚಪಾತಿ ಮಾಡಲಿಲ್ಲ ಎಂದುಕೊಳ್ಳುವುದಿಲ್ಲವೇ?' ಈ ಮಾತು ನನ್ನನ್ನು ಕುರಿತೇ ಇತ್ತು.

'ಹೋಗು, ಹಾಗಾದರೆ ಅಡಿಗೆ ಕೆಲಸ ಮುಗಿಸು. ನಾನು ಏನಾದರೂ ಮಾಡುವೆನೆಂದು ಆಶೆ ಇಟ್ಟುಕೊಳ್ಳಬೇಡ. ಆ ಮನೆಯಲ್ಲಿ ಗಾಣದೆತ್ತಿನಂತೆ ದುಡಿದು ಸಾಕಾಗಿ ಹೋಗಿದೆ' ಎಂದೆ. ಚಪಾತಿ ಮಾಡುವುದೇನೂ ನನಗೆ ಅಂಥ ಕಷ್ಟದ ಕೆಲಸವಾಗಿರಲಿಲ್ಲ. ಆದರೆ ಅಮ್ಮನ ಮಾತಿನಿಂದ ಬೇಸರವಾಗಿತ್ತು. ಅವಳು ಹೇಳುವಂತೆ ಅಲ್ಲಿಂದ ಒಂದು ಫೋನೂ ಬಂದಿಲ್ಲವೆಂಬ ಯೋಚನೆ ಬೇರೆ.

ಹಾಗೆ ನೋಡಿದರೆ ನಾನಲ್ಲಿಂದ ಸಿಟ್ಟಾಗಿ ಬಂದ ಕಾರಣವೇ ಕ್ಷುಲ್ಲಕವೆನಿಸುತ್ತಿತ್ತು. ಸುರೇಶ–ಸೀಮಾ ದಕ್ಷಿಣ ಭಾರತ ಪ್ರವಾಸಕ್ಕೆ ಹೋದವರು ಬರುವಾಗ ನಮ್ಮೆಲ್ಲರಿಗೂ–ನನಗೆ ಮೈಸೂರು ಸಿಲ್ಕ್ ಸೀರೆ, ಅತ್ತೆಗೆ ಧರ್ಮಾವರಂ ಸೀರೆ, ಮಾವನಿಗೆ ಪೂಜೆಗೆ ಉಡಲು ರೇಶಿಮೆ ಪಂಚೆ, ಪ್ರತಿಭಾಳಿಗೆ ಜರಿ ಬಾರ್ಡರ್ ಇರುವ ಘಾಗ್ರಾ–ಚೋಲಿ, ಇವರಿಗೆ ಹಾಗೂ ಪ್ರತೀಕನಿಗೆ ರೇಶಿಮೆ ಕುರ್ತಾ ತಂದಿದ್ದರು. ಎರಡು ದಿನಗಳಿಂದ ಬಂದ ಬಂದವರಿಗೆಲ್ಲ ಅವುಗಳನ್ನು ತೋರಿಸುತ್ತಿದ್ದರು. ಎಲ್ಲರೂ ಅವರ ಆಯ್ಕೆ ಚೆನ್ನಾಗಿದೆ ಎಂದು ಅವರನ್ನು ಹೊಗಳುವವರೇ. ನನಗಂತೂ ಕೇಳಿ ಕೇಳಿ